(3) ಸಭೆಯ ಮುಂದಿಡಲಾದ ಕಾಗದ ಪತ್ರಗಳು.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :— ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಪರವಾಗಿ, ಮಾನ್ಯ ಅಧ್ಯಕ್ಷರೆ, ನ್ಯಾಯಮೂರ್ತಿ ಶ್ರೀ ಆರ್.ಜಿ. ದೇಸಾಯಿ ವಿಚಾರಣಾ ಆಯೋಗದ ವರದಿಯನ್ನು ಈ ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು :— ಸಭೆಯ ಮುಂದೆ ಮಂಡಿಸಲಾಯಿತು.

(4) ಗಮನ ಸೆಳೆಯುವ ಸೂಚನೆ

ವಿಷಯ: ಗದಗ-ಬೆಟಗೇರಿ ನಗರದಲ್ಲಿ ನೀರು ಸರಬರಾಜು ವ್ಯವಸ್ಥೆಗೆ ಹಣ ಮಂಜೂರು ಮಾಡುವ ಬಗ್ಗೆ.

+ ಶ್ರೀ ಡಿ.ಆರ್. ಪಾಟೀಲ್ (ಗದಗ) :— ಮಾನ್ಯ ಅಧ್ಯಕ್ಷರೆ, ಗದಗ-ಬೆಟಗೇರಿ ನಗರದಲ್ಲಿ ನೀರು ಸರಬರಾಜು ಮಾಡುವ ವ್ಯವಸ್ಥೆಯನ್ನು ಸುಧಾರಣೆ ಮಾಡಲು ಸರ್ಕಾರದಿಂದ ಹಣ ಮಂಜೂರು ಮಾಡುವ ಬಗ್ಗೆ ನಾನು ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಗದಗ-ಬೆಟಗೇರಿ ನೀರು ಸರಬರಾಜು ಯೋಜನೆಗಾಗಿ 940 ಲಕ್ಷ ರೂಪಾಯಿಗಳ ಅಂದಾಜಿಗೆ ಸರ್ಕಾರ 1984 ರಲ್ಲಿಯೇ ಅನುಮೋದನೆ ನೀಡಿತ್ತು. ಸದರಿ ಯೋಜನೆಯನ್ನು 1992ರಲ್ಲಿ ಚಾಲ್ತಿಗೊಳಿಸಲಾಗಿದೆ. ಯೋಜನೆಯ ಒಂದನೇ ಹಂತವನ್ನು 1990ರಲ್ಲಿ ಕೈಗೆತ್ತಿಕೊಂಡಿದ್ದು ಬೇಕಾಗುವ ನೀರಿನ ಬೇಡಿಕೆಯಾಗಿ 1364 ದಶಲಕ್ಷ ಲೀಟರ್ ನೀರನ್ನು ಗದಗ-ಬೆಟಗೇರಿ ನಗರಕ್ಕೆ ಸರಬರಾಜು ಮಾಡಲು ವಿನ್ಯಾಸಗೊಳಿಸಲಾಗಿದೆ. ಹಾಲಿ ವ್ಯವಸ್ಥೆಯಿಂದ ಗದಗ-ಬೆಟಗೇರಿ ಪಟ್ಟಣಕ್ಕೆ ಪ್ರತಿದಿನ ಸುಮಾರು 12.712 ದಶಲಕ್ಷ ಲೀಟರ್‌ಗಳಷ್ಟು ನೀರನ್ನು ಸರಬರಾಜು ಮಾಡಲಾಗುತ್ತಿದೆ. ಸದರಿ ಯೋಜನೆಯಡಿ ವಿತರಣಾ ವ್ಯವಸ್ಥೆ ಮಾಡಲು ರೂ. 19.14 ಲಕ್ಷ ಅವಶ್ಯವಿದ್ದು ಕೆಲಸವನ್ನು ಕೈಗೊಂಡಿದ್ದರೂ ಸಹ ನಗರದ ಎಲ್ಲಾ ಪ್ರದೇಶಗಳಿಗೂ ನೀರು ಸರಬರಾಜು ಮಾಡಲು ಸಾಧ್ಯವಾಗಿರುವುದಿಲ್ಲ. ಆ ಮಧ್ಯೆ ನಗರ ಬಹಳ ಬೆಳವಣಿಗೆ ಹೊಂದಿದ್ದು ಸಾಕಷ್ಟು ಜಲ ಸಂಗ್ರಹಣಾಗಾರಗಳು ಮತ್ತು ವಿತರಣಾ ವ್ಯವಸ್ಥೆ ಇಲ್ಲದಿರುವ ಕಾರಣ ನಗರದ ಎಲ್ಲಾ ಪ್ರದೇಶಗಳಿಗೂ ಸರಿಸಮಾನವಾಗಿ ವಿತರಿಸಲು ಸಾಧ್ಯವಾಗುತ್ತಿಲ್ಲ. ಗದಗ-ಬೆಟಗೇರಿ ಪಟ್ಟಣಕ್ಕೆ ಮಂಡಳಿಯು ಸಗಟು ಸರಬರಾಜು ನಿರ್ವಹಿಸುತ್ತಿದ್ದು, ವಿತರಣಾ ವ್ಯವಸ್ಥೆಯನ್ನು ಗದಗ-ಬೆಟಗೇರಿ ನಗರಸಭೆ ನಿರ್ವಹಿಸುತ್ತಿದೆ. ಗದಗ-ಬೆಟಗೇರಿ ನಗರಕ್ಕೆ ಅಗತ್ಯವಾಗಿ ಬೇಕಾಗುವ ಜಲ ಸಂಗ್ರಹಣಾಗಾರಗಳನ್ನು ನಿರ್ಮಿಸಿ, ವಿತರಣಾ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಿ ಅಳವಡಿಸಲು ಹಾಲಿ ದರ ಪಟ್ಟಿಯಂತೆ 15 ಕೋಟಿ ರೂಪಾಯಿಗಳ ಅಂದಾಜು ತಯಾರಿಸಲಾಗಿದ್ದು, ಇದು ಪರಿಶೀಲನಾ ಹಂತದಲ್ಲಿದ್ದು, ಸದ್ಯದಲ್ಲಿಯೇ ಸದರಿ ಅಂದಾಜು ಪಟ್ಟಿಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗುವುದೆಂದು ಕರ್ನಾಟಕ ಜಲಮಂಡಳಿ ತಿಳಿಸಿರುತ್ತದೆ.

ಶ್ರೀ ಡಿ.ಆರ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ಜರುಗಿದ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಗೆ ಆಗಮಿಸಿದ್ದ ಮಾನ್ಯ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರು ಮಾತನಾಡಿ, ಸದರಿ ಯೋಜನೆಗೆ ಸರ್ಕಾರದಿಂದ ಕೂಡಲೇ ಮಂಜೂರಾತಿ ಕೊಡಿಸಿ ಮುಂದಿನ ಬೇಸಿಗೆಯೋಳಗೆ ಯೋಜನೆ ಕಾರ್ಯಗತಗೊಳ್ಳುವಂತೆ ಕ್ರಮ ಕೈಗೊಳ್ಳುವುದಾಗಿ ಭರವಸೆ ಕೊಟ್ಟಿದ್ದಾರೆ. ಆದುದರಿಂದ, ಆ ಭರವಸೆಯನ್ನು ಈಡೇರಿಸುವುದಕ್ಕೆ ಈ ಸದನದಲ್ಲಿ ತಾವು ಭರವಸೆ ಕೊಡಬೇಕು. ಏಕೆಂದರೆ, ಮಂತ್ರಿಮಂಡಲದ ಮುಂದಿನ ಸಭೆಯಲ್ಲಿ ಇದಕ್ಕೆ ಕ್ಲಿಯರೆನ್ಸ್ ಕೊಟ್ಟು ಹಣಕಾಸನ್ನು ಹೊಂದಿಸಿಕೊಂಡು ಬರುವ ಮಾರ್ಚ್ ತಿಂಗಳೊಳಗೆ, ಏಕೆಂದರೆ, ತಮಗೆ ಗೊತ್ತಿರುವಂತೆ ಬೇಸಿಗೆಯಲ್ಲಿ ಒಮ್ಮೊಮ್ಮೆ 10-15 ದಿವಸಗಳಿಗೊಮ್ಮೆ ಕುಡಿಯುವ ನೀರಿನ ಸರಬರಾಜಾಗುತ್ತದಾದ್ದರಿಂದ ಬೇಸಿಗೆ ಕಾಲದಲ್ಲಿ ಈ ತಾಪತ್ರಯ ಬಾರದಂತೆ ಕ್ರಮ ಕೈಗೊಳ್ಳುತ್ತೇವೆನ್ನುವ ಭರವಸೆಯನ್ನು ನಿಮ್ಮಿಂದ ಬಯಸುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್ :— ಮುಂದಿನ ಸಚಿವ ಸಂಪುಟದ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳುವುದಕ್ಕಾಗುವುದಿಲ್ಲ. ಆದರೆ, ಆದಷ್ಟು ಬೇಗನೆ ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಹಾಗೂ ಮುಂದಿನ ಬೇಸಿಗೆಯೊಳಗೆ ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವ ವ್ಯವಸ್ಥೆ ಮಾಡಬೇಕೆಂದು ಏನು ಕೇಳುತಿದ್ದಾರೆ, ಆ ಕುರಿತು ಕಾಮಗಾರಿಯನ್ನು ಕೈಗೊಳ್ಳುವುದಾಗಿ ಭರವಸೆ ಕೊಡುತ್ತಿದ್ದೇನೆ.

5) ಶಾಸನ ರಚನಾ ಕಾರ್ಯಕಲಾಪಗಳು

(ಅ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗಿಕರಿಸುವುದು.

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 1998 (ಮುಂದುವರೆದ ಚರ್ಚೆ)

ಅಧ್ಯಕ್ಷರು :— ಮಾನ್ಯ ಕಾಗೋಡು ತಿಮ್ಮಪ್ಪನವರೆ, ನಿನ್ನೆ ದಿವಸ ನಿಮ್ಮ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಎಲ್ಲಾ ಬೇಡಿಕೆಗಳನ್ನು ಒಟ್ಟಿಗೆ ಮೂವ್ ಮಾಡಿಸಿದರೆ ಮಾತನಾಡಬಯಸುವ ಮಾನ್ಯ ಸದಸ್ಯರುಗಳಿಗೆ ವೈಡ್ ರೇಂಜ್ ಇರುತ್ತದೆ, ಅಧಿವೇಶನದ ಅವಧಿ ಕಡಿಮೆಯಿದ್ದು ವಿಸ್ತರಣೆಯಾಗುವುದಿದಲ್ಲವಾದ್ದರಿಂದ ಯಾವ್ಯಾವ ಮಾನ್ಯ ಸದಸ್ಯರಿಗೆ ತಮಗೆ ಅನುಕೂಲವಾಗುವ ಬೇಡಿಕೆಗಳ ಮೇಲೆ ಮಾತನಾಡಬಹುದು ಎಂಬ ಒಂದು ಸಲಹೆಯನ್ನು ಕೊಟ್ಟರು. ನಾನು ಅವರ ಸಲಹೆಯನ್ನು ಸ್ವೀಕರಿಸಿ ಇವೊತ್ತು ಈ ತೀರ್ಮಾನಕ್ಕೆ ಬಂದಿದ್ದೇನೆ. ನಿನ್ನೆ ತಾವು ಸದನದಲ್ಲಿರಲಿಲ್ಲ, ದಯಮಾಡಿ ಸಹಕರಿಸಬೇಕು.